ಜನಸಂದಣಿಯ ಮಧ್ಯದಲ್ಲೇ ದಾರಿ ಮಾಡಿಕೊಂಡು ಹೊರಬಂದೆ.

''ಆಗಲೇ 8 ಗಂಟೆಯಾಯ್ತು... ನಡೀರಿ ಮನೆಗೆ ಹೋಗೋಣ. ಇಡೀ ದಿನ ಚಿನ್ನದ ಸರದ ಸುದ್ದಿಯಲ್ಲೇ ಕಳೆದುಹೋಯ್ತು. ಬೆಳಗ್ಗೇನೂ ಬೇಗ ಎದ್ದಿದ್ದೀಯ. ಈಗ್ಲಾದ್ರೂ ಹೋಗಿ ಊಟ ಮಾಡಿ ಸ್ವಲ್ಪ ಬೇಗನೇ ಮಲಗೋಣ'' ಎನ್ನುತ್ತ ಮಾಲಾ ಮತ್ತು ಪುಟ್ಟಿಯನ್ನು ಕರೆದುಕೊಂಡು ಮನೆಯಕಡೆ ಹೊರಟೆ.

ಮನೆಯ ಬಳಿ ಬರುತ್ತಲೇ ಗೇಟಿನ ಬಳಿ ಯಾರೋ ಮೂರು ಜನ ನಿಂತಿರುವುದು ಅಸ್ಪಷ್ಟವಾಗಿ ಕಾಣಿಸಿತು. ಮನೆಯ ಎದುರಿಗಿನ ರಸ್ತೆಬದಿಯ ಬೀದಿದೀಪ ಕೆಟ್ಟು ಹೋಗಿ ಒಂದು ವಾರವಾಗಿತ್ತು. ಮಬ್ಬು ಬೆಳಕಿನಲ್ಲಿ ಯಾರು ಎಂಬುದು ತಿಳಿಯಲಿಲ್ಲ. ಹತ್ತಿರ ಹೋದಂತೆ ಆಕೃತಿಗಳು ಸ್ಪಷ್ಟವಾದವು.

''ಏನು ಶ್ರೀನಿವಾಸ್ ಅವರೇ... ಇಷ್ಟು ಹೊತ್ತಿನಲ್ಲಿ ಈ ಕಡೆ? ಏನಾದರೂ ಅವಸರದ ಕೆಲಸವಿತ್ತೇ? ಇವರಿಬ್ಬರು ಯಾರು ಎಂದು ನನಗೆ ಗುರುತು ಹತ್ತಲಿಲ್ಲ...'' ಶ್ರೀನಿವಾಸರನ್ನು ಗುರುತಿಸಿ ಕೇಳಿದೆ.

''ಒಳಗೆ ಕುಳಿತು ಮಾತಾಡೋಣವೇ? ಸ್ವಲ್ಪ ಸೂಕ್ಷ್ಮ ವಿಷಯ... ಹೊರಗಡೆ ಮಾತನಾಡುವುದು ಅಷ್ಟು ಸೂಕ್ತವಲ್ಲ.'' ಶ್ರೀನಿವಾಸ್ ಹೇಳಿದರು.

''ಖಂಡಿತವಾಗಿ. ಬನ್ನಿ, ಒಳಗೆ ಹೋಗೋಣ...'' ಮನೆಯ ಬಾಗಿಲಿನ ಬೀಗ ತೆರೆದು, ಅತಿಥಿಗಳನ್ನು ಸೋಫಾದಮೇಲೆ ಕೂರಿಸಿ, ಮಾಲಾಳಿಗೆ ಚಹಾ ಮಾಡಿತರಲು ತಿಳಿಸಿದೆ.

ಶ್ರೀನಿವಾಸ್ ನನಗೆ ಕ್ಲಬ್ಬಿನಲ್ಲಿ ಪರಿಚಯ. ಅವರೂ ನನ್ನಂತೆ ವಾರದಲ್ಲಿ 2–3 ದಿನ ಕ್ಲಬ್ಬಿಗೆ ಬ್ಯಾಡ್ಮಿಂಟನ್ ಆಡಲು ಬರುತ್ತಿದ್ದರು. ನಮ್ಮದು ಬ್ಯಾಟ್ಮಿಂಟನ್ ಕೋರ್ಟಿಗಷ್ಟೇ ಸೀಮಿತವಾಗಿದ್ದ ಹಾಯ್ ಬಾಯ್ ಸ್ನೇಹ.

''ಈ ದಂಪತಿ ಇದೇ ಬಡಾವಣೆಯವರು. ಸಂಜೆ 7 ಗಂಟೆಯಿಂದ, ಬಹಳ ಹೊತ್ತು ನಮ್ಮ ಮನೆಯೆದುರಿಗಿನ ಪಾರ್ಕಿನ ಬದಿಯ ರಸ್ತೆಯ ಹತ್ತಿರ ಏನೋ ಹುಡುಕುತ್ತಿದ್ದರು. ಏನು ಎಂದು ವಿಚಾರಿಸಿದಾಗ, ಇಂದು ಬೆಳಗಿನಜಾವ ಒಂದು ಚಿನ್ನದ ಸರ ಕಳೆದುಕೊಂಡಿರುವ ವಿಚಾರ ತಿಳಿಸಿದರು. ಇಂದು ಬೆಳಗ್ಗೆ, ನೀವು ಪಾರ್ಕಿನ ಗೇಟಿನ ಹತ್ತಿರ ನಿಮಗೇನೋ ಬೆಲೆಬಾಳುವ ವಸ್ತು ಸಿಕ್ಕಿದೆ ಅಂತ ನೋಟಿಸ್ ಅಂಟಿಸಿದ್ದು ನೋಡಿದ್ದೆ. ನಿಮಗೆ ಸಿಕ್ಕಿರುವ ವಸ್ತು ಮತ್ತು ಇವರು ಕಳೆದುಕೊಂಡಿರುವ ವಸ್ತು, ಎರಡೂ ಒಂದೇ ಆಗಿರಬಹುದೇನೋ ಎಂಬ ನಿರೀಕ್ಷೆಯಿಂದ, ಇವರ ಸಂಕಟವನ್ನು ನೋಡಲಾಗದೇ ಅವರನ್ನು ಇಲ್ಲಿಗೆ ಕರೆತಂದೆ...'' ಶ್ರೀನಿವಾಸ್ ತಮ್ಮ ತಡಸಂಜೆಯ ದಿಢೀರ್ ಭೇಟಿಯ ಹಿಂದಿನ ಉದ್ದೇಶ ತಿಳಿಸಿದರು.

ನನಗೆ ಒಮ್ಮೆಲೇ ಗಂಟಲಲ್ಲಿ ಏನೋ ಸಿಕ್ಕಿಕೊಂಡಂತಹ ಅನುಭವ. ಹೇಗೆ ಮಾತು ಮುಂದುವರೆಸಬೇಕು ಎಂಬುದೇ ತಿಳಿಯದಂತಾಗಿ, ಮಾಲಾ ತಂದುಕೊಟ್ಟ ಚಹಾವನ್ನು ಬಂದ ಅತಿಥಿಗಳಿಗೆ ಕುಡಿಯಲು ಹೇಳಿ, ನಾನೂ ಚಹ ಕುಡಿಯುತ್ತ ಕುಳಿತೆ.

''ನೀವು ಕಳೆದುಕೊಂಡ ಸರ ಯಾವುದು? ಸುಮಾರು ಎಷ್ಟು ತೂಕದ್ದಿರಬಹುದು? ಎಷ್ಟು ಹೊತ್ತಿಗೆ ಕಳೆದುಕೊಂಡಿದ್ದಿರಿ? ಪಾರ್ಕಿನಬಳಿಯೇ ಕಳೆದುಕೊಂಡಿದ್ದೀರಿ ಎಂದು ನಿಮಗೆ ಹೇಗೆ ಗೊತ್ತು?'' ನಾನು ಮಾತು ಪ್ರಾರಂಭಿಸಲು ಹಿಂಜರಿಯುತ್ತಿರುವುದನ್ನು ಅರಿತ ಮಾಲಾ, ತಾನೇ ಮಾತು ಆರಂಭಿಸಿ, ಬಂದ ದಂಪತಿಯ ಎದುರು ಸರಣಿ ಪ್ರಶ್ನೆಗಳನ್ನು ಸುರಿಸಿದಳು.

''ನಮಗೆ ರೂಪಾ–ದೀಪಾ ಎಂಬ ಅವಳಿ ಹೆಣ್ಣುಮಕ್ಕಳು. ಕಳೆದ ಸೆಪ್ಟೆಂಬರಿಗೆ ಐದು ವರ್ಷ